**ಕರ್ನಾಟಕ ಸರ್ಕಾರ**

ಕ್ರಮಾಂಕ : ಡಿಪಿಎಆರ್ 195 ಕೆಕೆಜೆ 92

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ 20-7-1992.

**ಸುತ್ತೋಲೆ**

ವಿಷಯ :- ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಮತ್ತು ಸದಸ್ಯರು ಸರ್ಕಾರಿ ಕಛೇರಿಗಳಿಗೆ ಭೇಟಿ ನಿಡಿದಾಗ ಅವರಿಗೆ ತನಿಖೆ ಕಾರ್ಯದಲ್ಲಿ ಸಹಕಾರ ನಿಡಲು ಸೂಚನೆ.

ಉಲ್ಲೇಖ :- 1) ಅಧಿಸೂಚನೆ ಸಂಖ್ಯೆ : ಡಿಪಿಎಆರ್ 18 ಕೆಒಎಲ್ 92, ದಿನಾಂಕ 6ನೇ ಫೆಬ್ರವರಿ 1992.

2) ಆದೇಶ ಸಂಖ್ಯೆ : ಡಿ.ಪಿ.ಎ.ಆರ್ 182 ಕೆ.ಒ.ಎಲ್. 92, ದಿನಾಂಕ 6ನೇ ಜುಲೈ 1992.

ಉಲ್ಲೇಖ (1) ರಲ್ಲಿನ ಅಧಿಸೂಚನೆಯಲ್ಲಿ ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಿದೆ. ಉಲ್ಲೇಖ (2)ರಲ್ಲಿನ ಆದೇಶದಲ್ಲಿ ಪ್ರಾಧಿಕಾರದ ರೂಪು-ರೇಷೆಗಳು, ಅಧಿಕಾರವ್ಯಾಪ್ತಿ ಇತ್ಯಾದಿಗಳ ಬಗ್ಗೆ ಆದೇಶಿಸಿದೆ. ಸದರಿ ಆದೇಶದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಯಾವುದೇ ಕಛೇರಿಗೆ ಭೇಟಿ ನಿಡಲು ಅಧಿಕಾರ ನಿಡಿದೆ. ಸರ್ಕಾರಿ ಅಧಿಕಾರಿಯ ಸಮಕ್ಷಮದಲ್ಲಿ ಕಛೇರಿಗಳಲ್ಲಿ ಕನ್ನಡ ಬಳಕೆ ತನಿಖೆ ಕೈಗೊಂಡು ಕನ್ನಡ ಅನುಷ್ಠಾನ ಸಂಬಂಧ ಆದೇಶಗಳ ಉಲ್ಲಂಘನೆಯಾಗಿದ್ದರೆ, ಅಂಥವರ ಮೇಲೆ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ವರದಿ ಮಾಡುವುದು ಪ್ರಾಧಿಕಾರದ ಕಾರ್ಯವ್ಯಾಪ್ತಿಗಳಲ್ಲಿ ಒಂದಾಗಿದೆ.

ಆದ್ದರಿಂದ, ಪ್ರಾಧಿಕಾರದ ಅಧ್ಯಕ್ಷರು ಹಾಗೂ ಸದಸ್ಯರುಗಳು ಕನ್ನಡ ಬಳಕೆ

ಪ್ರಗತಿ ಬಗ್ಗೆ ತಿಳಿಯಲು ಹಾಗೂ ಡಾ: ಸರೋಜಿನಿ ಮಹಿಷಿ ವರದಿ ಶಿಫಾರಸುಗಳ ಅನುಷ್ಠಾನ ಸಂಬಂಧ ಕಾರ್ಯಾಲಯಗಳಿಗೆ ಭೇಟಿ ನಿಡಿದ ಸಂದರ್ಭದಲ್ಲಿ ಕಛೇರಿ ಮುಖ್ಯಸ್ಥರು ಸ್ವತಃ ಹಾಜರಿದ್ದು ಎಲ್ಲಾ ಮಾಹಿತಿಗಳನ್ನು ಒದಗಿಸಬೇಕಲ್ಲದೆ ಪೂರ್ಣ ಸಹಕಾರ ನಿಡಬೇಕೆಂದು ಈ ಮೂಲಕ ಕೋರಿದೆ.

ಕಛೇರಿಗೆ ಭೇಟಿ ನೀಡುವ ಮೊದಲು ಪ್ರಾಧಿಕಾರವು ಅಂಥ ಕಛೇರಿಯಿಂದ ಮಾಹಿತಿ ಪಡೆಯಲು ಇಚ್ಛಿಸಿದಲ್ಲಿ ಕಳುಹಿಸಕೊಡಲಾಗುವ ಪ್ರಶ್ನಾವಳಿಗೆ ಉತ್ತರ ಒದಗಿಸಬೇಕೆಂದೂ ಕೋರಲಾಗಿದೆ.

ಸಹಿ/-

**(ಬಿ. ಪಾರ್ಥಸಾರಥಿ)**

ಸರ್ಕಾರದ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.